# ಟ್ವಿಟರ್‌ನಿಂದ ಹೊಸ ಫೀಚರ್ಸ್!

■ **ಶಶಿಕುಮಾರ್ ಸಿ.**



ಜನಪ್ರಿಯ ಸೋಷಿಯಲ್ ಮೀಡಿಯಾ ಟ್ವಿಟರ್, ತನ್ನ ಜಾಹೀರಾತು ವ್ಯವಹಾರಕ್ಕೆ ಪೂರಕವಾಗಿ ಚಂದಾದಾರಿಕೆಯ ಮಾದರಿಯನ್ನು ಬಳಕೆದಾರರಿಗೆ ಪರಿಚಯಿಸಲು ಸಿದ್ಧತೆ ನಡೆಸುತ್ತಿದೆ. ಚಂದಾದಾರಿಕೆಯ ಮಾದರಿಯ ಪ್ಲಾಟ್‌ಫಾರ್ಮ್‌ಗಾಗಿ 'ಅನ್ ಡು ಸೆಂಡ್ ಬಟನ್', 'ಡಿಫರೆಂಟ್ ಫಾಂಟ್ ಕಲರ್', 'ಬ್ಯಾಡ್ಜಸ್' ಸೇರಿದಂತೆ ಹಲವು ಹೊಸ ಫೀಚರ್ಸ್ ಅನ್ನು ಗ್ರಾಹಕರ ಬಳಕೆಗೆ ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ಟ್ವಿಟರ್ ಕಾರ್ಯೋನ್ಮುಖವಾಗಿದೆ.

ಆರ್ಥಿಕ ಬಿಕ್ಕಟ್ಟಿನ ಸಂದರ್ಭದಲ್ಲಿ ತನ್ನ ಹಣಕಾಸಿನ ಸಮತೋಲನ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಟ್ವಿಟರ್‌ನ ಹೊಸ ಚಟುವಟಿಕೆಗಳು ಮಹತ್ವ ಪಡೆದುಕೊಂಡಿವೆ. ಈ ಆರ್ಥಿಕ ಸ್ಥಿರತೆ ಸಾಧಿಸುವ ಸಲುವಾಗಿಯೇ ತನ್ನ ಬಳಕೆದಾರರಿಗೆ ಹೊಸ ರೀತಿಯ ಫೀಚರ್ಸ್‌ಗಳನ್ನು ಪರಿಚಯಿಸುವ ಬಗ್ಗೆ ಸಮೀಕ್ಷೆ ನಡೆಸಲಾಗಿದೆ. ಸಮೀಕ್ಷೆಯಲ್ಲಿ ಭಾಗಿಯಾಗಲು ಬಯಸುವ ಬಳಕೆದಾರರು, ಪ್ರಮುಖವಾದ ಫೀಚರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ.

### ಅನ್ ಡು ಸೆಂಡ್ ಬಟನ್

ಅನ್ ಡು ಸೆಂಡ್ ಬಟನ್ ಆಯ್ಕೆ ಟ್ವಿಟರ್ ಪ್ರಸ್ತುತ ಪಡಿಸಲಿರುವ ಹೊಸ ಫೀಚರ್ಸ್‌ಗಳಲ್ಲೊಂದು. ಈ ಆಯ್ಕೆಯಿಂದಾಗಿ ಬಳಕೆದಾರರು ಮಾಡುವ ಟ್ವೀಟ್ ಅನ್ನು ಮರುಪಡೆಯಲು ಅಥವಾ ಹಿಂಪಡೆಯಲು ಗರಿಷ್ಠ 30 ಸೆಕೆಂಡುಗಳ ವಿಂಡೋ ಆಯ್ಕೆಯನ್ನು ನೀಡುತ್ತದೆ.

### ಕಸ್ಟಮ್ ಕಲರ್ಸ್

ಕಸ್ಟಮ್ ಕಲರ್ಸ್ ಆಯ್ಕೆಯು ಬಳಕೆದಾರ ಟ್ವಿಟರ್ ಖಾತೆಯನ್ನು ವರ್ಣರಂಜಿತಗೊಳಿಸುತ್ತದೆ. ಈ ಫೀಚರ್ಸ್‌ನಿಂದ ಟ್ವಿಟರ್‌ನ ಫಾಂಟ್‌ಗಳು ಮತ್ತು ಥೀಮ್ ಬಣ್ಣಗಳನ್ನು ಬದಲಾಯಿಸಲು ಸಾಧ್ಯವಾಗುತ್ತದೆ. ಇದು ಬಳಕೆದಾರರು ಆಯ್ಕೆ ಮಾಡಿದ ಬಣ್ಣದಲ್ಲಿ ಹಿನ್ನೆಲೆ ಬಣ್ಣ, ಉಲ್ಲೇಖಗಳು, ಹ್ಯಾಶ್ ಟ್ಯಾಗ್‌ಗಳು ಮತ್ತು ಐಕಾನ್ ಅನ್ನು ಬದಲಾಯಿಸುತ್ತದೆ.

### ವಿಡಿಯೊ

ಚಂದಾದಾರಿಕೆಯ ಟ್ವಿಟರ್ ಖಾತೆಯ ಸದಸ್ಯತ್ವ ಪಡೆದವರು ಪ್ರಸ್ತುತ ಅಪ್‌ಲೋಡ್ ಮಾಡಲು ಅವಕಾಶವಿರುವ ಮಿತಿಗಿಂತ ಹೆಚ್ಚಿನ, ಸ್ಪಷ್ಟವಾಗಿ ಕಾಣುವ ವಿಡಿಯೊವನ್ನು ಅಪ್‌ಲೋಡ್ ಮಾಡಬಹುದು. ಅಂದರೆ, 5x ಉದ್ದದ ವಿಡಿಯೊಗಳನ್ನು ಪ್ರಕಟಿಸಲು ಟ್ವಿಟರ್ ಅನುಮತಿಸುತ್ತದೆ. ರೆಸಲ್ಯೂಶನ್ 8192X8192 ಪಿಕ್ಸೆಲ್‌ಗಳಿಗಿಂತ ಹೆಚ್ಚಾಗುತ್ತದೆ.

### ಬ್ಯಾಡ್ಜಸ್

ಬಳಕೆದಾರರು ಹೊಂದಿರುವ ಅಥವಾ ಕೆಲಸ ಮಾಡುವ ವ್ಯವಹಾರಗಳಿಗೆ ಟ್ವಿಟರ್ ಪರಿಚಯಿಸಲಿರುವ ಹೊಸ ಫೀಚರ್ಸ್‌ಗಳಲ್ಲಿ ಒಂದಾದ ಬ್ಯಾಡ್ಜಸ್ ಲಿಂಕ್ ಕಲ್ಪಿಸುತ್ತದೆ. ಉದಾಹರಣೆಗೆ, ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬರು ತಾನು ಕಾರ್ಯ ನಿರ್ವಹಿಸುವ ಕಂಪನಿಯ ಬ್ಯಾಡ್ಜ್ ಅನ್ನು ಸೇರಿಸಬಹುದು. ಅದರ ಮೂಲಕ ಟ್ವೀಟ್ ಮಾಡಬಹುದು. ಬಳಕೆದಾರರು ತಮ್ಮ ಪ್ರೊಫೈಲ್‌ಗೆ ಒಂದಕ್ಕಿಂತ ಹೆಚ್ಚು ಬ್ಯಾಡ್ಜ್‌ಗಳನ್ನು ಸೇರಿಸಿಕೊಳ್ಳುವ ಅವಕಾಶವನ್ನು ಪಡೆಯಬಹುದು.

### ಆಟೊ ರೆಸ್ಪಾನ್ಸ್

ಈ ಫೀಚರ್ಸ್ ಆಟೋ ರಿಪ್ಲೆಗಳನ್ನು ಹೊಂದಿಸುತ್ತದೆ, ಅದನ್ನು ಪ್ರತ್ಯುತ್ತರಗಳಾಗಿಯೂ ಕಳುಹಿಸಬಹುದಾಗಿದೆ. ಅಲ್ಲದೆ ಟ್ವಿಟರ್‌ನ ಚಂದಾದಾರಿಕೆಯ ಪ್ಲಾಟ್‌ಫಾರ್ಮ್‌ನಲ್ಲಿ, ಆಟೊ ರಿಪ್ಲೆ ಆಯ್ಕೆಯು ಬಳಕೆದಾರರ ಸ್ವಯಂ ಪ್ರತಿಕ್ರಿಯೆಗಳ ಮೆನುವನ್ನು ಬರೆಯಲು ಮತ್ತು ಸೆಟ್ ಮಾಡಲು ಅನುವುಮಾಡಿಕೊಡುತ್ತದೆ.

### ಅಡ್ವಾನ್ಸ್ಡ್ ಅನಾಲಿಟಿಕ್ಸ್

ಟ್ವಿಟರ್ ಬಳಕೆದಾರರು ಪೋಸ್ಟ್ ಮಾಡಲು ಉತ್ತಮ ಸಮಯ, ಬಳಕೆದಾರರ ಪ್ರಮಾಣದ ದತ್ತಾಂಶಗಳು ಸೇರಿದಂತೆ ಸುಧಾರಿತ ವಿಶ್ಲೇಷಣೆಗಳಿಗೆ ಪ್ರವೇಶವನ್ನು ಈ ಆಯ್ಕೆಯು ಹೊಂದಿಸುತ್ತದೆ.

ಬಳಕೆದಾರರಿಗೆ ಹೊಸ ಆಯ್ಕೆಗಳನ್ನು ಒದಗಿಸುವ ಮೂಲಕ ಟ್ವಿಟರ್ ತಾನೂ ವರ್ಣರಂಜಿತಗೊಳ್ಳುತ್ತಿದೆ. ಈ ಬದಲಾವಣೆ ಆರ್ಥಿಕ ಯಶಸ್ಸಿನ ರೂಪದಲ್ಲೂ ಬದಲಾಗುತ್ತದಾ ಎನ್ನುವುದನ್ನು ಕಾದು ನೋಡಬೇಕು. ■

ॐ ✝ ☪ ಸರ್ವೇಜನಃ ಸುಖಿನೋ ಭವಂತುಃ ॐ ✝ ☪
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
9620444460
ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.